**ದಿನಾಂಕ: 18-06-2022 ರಂದು 10-30 ಕ್ಕೆ ಡಾ. ಸುರೇಶ್, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-179 (ಶಾಖಾಂಬರಿನಗರ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್-179ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| ಅಧ್ಯಕ್ಷರು | ನೋಡಲ್ ಅಧಿಕಾರಿ |
| ಸದಸ್ಯ ಕಾರ್ಯದರ್ಶಿ | ವಾರ್ಡ್ 179ರ ಸಹಾಯಕ ಅಭಿಯಂತರರು |
| ಸದಸ್ಯರುಗಳು | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| ಸದಸ್ಯರುಗಳು | ಜೆ.ಪಿ.ನಗರ ಬೆಸ್ಕಾಂ ಅಭಿಯಂತರರು |
| ಸದಸ್ಯರುಗಳು | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| ಸದಸ್ಯರುಗಳು | ಅರಣ್ಯ ಸಂರಕ್ಷಣಾಧಿಕಾರಿಗಳು |
| ಸದಸ್ಯರುಗಳು | ಬೀದಿ ದೀಪ ನಿರ್ವಹಣಾ ಅಭಿಯಂತರರು |
| ಸದಸ್ಯರುಗಳು | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| ಸದಸ್ಯರುಗಳು | ರಸ್ತೆ ಮೂಲಭೂತ ಸೌಕರ್ಯ (ದಕ್ಷಿಣ) |
| ಸದಸ್ಯರುಗಳು | ಯೋಜನೆ (ದಕ್ಷಿಣ) |
| ಸದಸ್ಯರುಗಳು | ಠಾಣಾಧಿಕಾರಿಗಳು, ನ್ಯಾಯ ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ |
| ಸದಸ್ಯರುಗಳು | ಬೃಹತ್ ನೀರುಗಾಲುವೆ ಅಭಿಯಂತರರು |
| ಸದಸ್ಯರುಗಳು | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| ಸದಸ್ಯರುಗಳು | ನಾಗರೀಕ ಕಲ್ಯಾಣ ಸಂಘ |

## :ನಡಾವಳಿಯ ವರದಿ:

- ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಮನೋಹರ್ .ಡಿ, ಸಹಾಯಕ ಅಭಿಯಂತರರು ವಾರ್ಡ್ 179 ಶಾಖಾಂಬರಿನಗರ, ಜೆ.ಪಿ.ನಗರ ಉಪವಿಭಾಗ ರವರು ಮಾತನಾಡುತ್ತಾ ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- 179 ವಾರ್ಡ್ ಕಛೇರಿಯ ಪಕ್ಕದಲ್ಲಿರುವ ಹೆಲ್ತ್ ಅಫೀಸ್ ಹಾಗೂ ಹಲವು ಕಡೆಗಳಲ್ಲಿ ಕಳ್ಳತನವಾಗುತ್ತಿರುವುದಾಗಿ ರಾತ್ರಿ ವೇಳೆಯಲ್ಲಿ ಪೋಲೀಸ್ ಬೀಟ್ ರವರನ್ನು ಹಾಕುವಂತೆ ಚರ್ಚಿಸಲಾಯಿತು.

ಕ್ರಮ :- ಜಯನಗರ ಪೋಲೀಸ್ ಠಾಣೆ

*ಪು.ತಿ.ನೋ.*

- ಕಾಲರ ರೋಗ ಹೆಚ್ಚಾಗುತ್ತಿರುವುದರಿಂದ ಶುದ್ಧ ಕುಡಿಯುವ ನೀರಿನ ಘಟಕದ ನೀರನ್ನು ಪರಿವೀಕ್ಷಿಸುವ ಬಗ್ಗೆ ಹಾಗೂ ಕಸದ ಗಾಡಿಯ ಮೈಕಿನಿಂದ ಕಾಲರ ರೋಗದ ಬಗ್ಗೆ ಅರಿವು ಮೂಡಿಸುವಂತೆ ಚರ್ಚಿಸಲಾಯಿತು. **ಕ್ರಮ :- ಬಿಡಬ್ಲ್ಯೂಎಸ್‌ಎಸ್‌ಬಿ, ಜೆ.ಪಿ.ನಗರ ಹಾಗೂ ಸ.ಕಾ.ನಿ.ಅ., ಎಸ್‌ಡಬ್ಲ್ಯೂಎಂ.**

- ಪೌರ ಕಾರ್ಮಿಕರಲ್ಲಿ Shredder Machine ಹಾಳಾಗಿದ್ದು, ಕೂಡಲೇ ರಿಪೇರಿ ಮಾಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲು ಕೋರಲಾಯಿತು. **ಕ್ರಮ :- ಸ.ಕಾ.ನಿ.ಅ., ಎಸ್.ಡಬ್ಲ್ಯೂ.ಎಂ., ಜಯನಗರ ವಿಭಾಗ**

- ಒಣ ಕಸ ಮತ್ತು ಹಸಿ ಕಸ ವಿಂಗಡಣೆ ಮಾಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಹಾಗೂ 5ನೇ ಬಡಾವಣೆ ಜಯನಗರದಲ್ಲಿ ಪೌರ ಕಾರ್ಮಿಕರುಗಳ ಕೊರತೆಯಿದ್ದು, ಕಸವನ್ನು ತೆರವುಗೊಳಿಸಲು ತೊಂದರೆಯಾಗುತ್ತಿರುವ ಬಗ್ಗೆ, ಮೇಜರ್(ಮೆಟ್ರೋ)ರಸ್ತೆಗಳಲ್ಲಿ ಮೆಕ್ಯಾನಿಕಲ್ ಸ್ವೀಪರ್‌ಗಳು ಕಾರ್ಯನಿರ್ವಹಿಸುತ್ತಿರದ ಬಗ್ಗೆ ಚರ್ಚಿಸಲಾಯಿತು.

**ಕ್ರಮ :- ಸ.ಕಾ.ನಿ.ಅ., ಎಸ್.ಡಬ್ಲ್ಯೂ.ಎಂ.,**

- 44ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್ ದುರಸ್ಥಿಗೊಂಡಿರುವುದು ಅಲ್ಲದೇ ಹೊಸದಾಗಿ ಸ್ಯಾನಿಟರಿ ಲೇನ್‌ಅನ್ನು ಅರ್ಧಕ್ಕೆ ಮಾತ್ರ ಅಳವಡಿಸಲಾಗಿದ್ದು, ಬಾಕಿ ಇರುವ ರಸ್ತೆಗಳಿಗೆ ಹೊಸ ಸ್ಯಾನಿಟರಿ ಲೈನ್ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಚರ್ಚಿಸಲಾಯಿತು.

**ಕ್ರಮ :- ಬಿಡಬ್ಲ್ಯೂಎಸ್‌ಎಸ್‌ಬಿ, ಜೆ.ಪಿ.ನಗರ**

- ಲಕ್ಷ್ಮಣರಾವ್ ಬುಲೇವಾರ್ಡ್ ಉದ್ಯಾನವನವು ರಾತ್ರಿ 9.30ರ ನಂತರವು ಉದ್ಯಾನವನದ ಗೇಟ್‌ಅನ್ನು ತೆರೆಯುತ್ತಿರುವುದರಿಂದ ಒಳಗಡೆ ಮಧ್ಯಪಾನ, ಧೂಮಪಾನ ಅನಧಿಕೃತ ಚಟುವಟಿಕೆಗಳನ್ನು ನಡೆಸುತ್ತಿರುವುದರ ಬಗ್ಗೆ ಚರ್ಚಿಸಲಾಗಿದ್ದು, ಕೂಡಲೇ ಕ್ರಮ ಕೈಗೊಳ್ಳಲು ಹಾಗೂ ವಾರ್ಡ್ 179ರ ವ್ಯಾಪ್ತಿಯ ಉದ್ಯಾನವನದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸುವಂತೆ ಕೋರಲಾಯಿತು.

**ಕ್ರಮ :- ತೋಟಗಾರಿಕೆ ಇಲಾಖೆ (ದಕ್ಷಿಣ)**

- ಬೀದಿ ಬದಿ ಹಣ್ಣು ವ್ಯಾಪಾರ ಮಾಡುವವರು ಹಣ್ಣುಗಳನ್ನು ಕತ್ತರಿಸಿ ಗಾಜಿನ ಡಬ್ಬದಲ್ಲಿ ಶೇಖರಿಸಿ ಮಾರುವಂತೆ ಸೂಚಿಸುವಂತೆ, ಇಲ್ಲವಾದಲ್ಲಿ ದಂಡ ವಿಧಿಸುವ ಬಗ್ಗೆ ಚರ್ಚಿಸಲಾಯಿತು.

**ಕ್ರಮ :- ಆರೋಗ್ಯ ಇಲಾಖೆ**

- 10ನೇ ಮುಖ್ಯರಸ್ತೆ, 5ನೇ ಬ್ಲಾಕ್ ಜಯನಗರ, ಶಾಲಿನಿ ಗ್ರೌಂಡ್ ಹೊರಭಾಗದಲ್ಲಿ ಕಸದ ಡಬ್ಬವನ್ನು ಇಟ್ಟಿದ್ದು, ಅಕ್ಕ-ಪಕ್ಕದ ನಿವೇಶನದವರು ಕಸವನ್ನು ತಂದು ಹಾಕುತ್ತಿದ್ದು, ಇದರಿಂದಾಗಿ ಕಸ ವಿಲೇವಾರಿ ಮಾಡದೇ ಅಲ್ಲಿಯೇ ಬಿಟ್ಟಿರುತ್ತಾರೆ. ಆದ ಕಾರಣ ಕೂಡಲೇ ತೆರವುಗೊಳಿಸುವಂತೆ ಕೋರಲಾಯಿತು.

**ಕ್ರಮ :- ಬಿಡಬ್ಲ್ಯೂಎಸ್‌ಎಸ್‌ಬಿ, ಜೆ.ಪಿ.ನಗರ**

- ಕಾಂಪ್ಯಾಕ್ಟರ್ ಲಾರಿಗಳ ಕೊರತೆ ಕಂಡುಬಂದಿದ್ದು, ಇದರಿಂದಾಗಿ ಕಸ ವಿಲೇವಾರಿ ಮಾಡಲು ತೊಂದರೆಯಾಗುತ್ತಿರುವುದರಿಂದ ಹೆಚ್ಚಿನ ಕಾಂಪ್ಯಾಕ್ಟರ್ ಲಾರಿಗಳನ್ನು ಒದಗಿಸುವಂತೆ ಚರ್ಚಿಸಲಾಯಿತು.

**ಕ್ರಮ :- ಆರೋಗ್ಯ ಇಲಾಖೆ, ಜಯನಗರ**

- 15ನೇ ಅಡ್ಡರಸ್ತೆ, 7ನೇ ಬಡಾವಣೆ ಜಯನಗರದಲ್ಲಿ ಕಾವೇರಿ ನೀರಿನ ಪೈಪ್ ದುರಸ್ಥಿಗೊಂಡು ನೀರು ರಸ್ತೆಯ ಮೇಲೆ ಹರಿಯುತ್ತಿರುವುದಾಗಿ ಚರ್ಚಿಸಲಾಯಿತು. ಅದನ್ನು ಕೂಡಲೇ ಸರಿಪಡಿಸಬೇಕೆಂದು ಕೋರಲಾಯಿತು.

**ಕ್ರಮ :- ಸ.ಕಾ.ನಿ.ಅ., ಬಿಡಬ್ಲ್ಯೂಎಸ್ಎಸ್ಬಿ**

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಇದೇ ರೀತಿಯಾಗಿ ಮಾಸಿಕ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಜೆ.ಪಿ.ನಗರ) ಉಪವಿಭಾಗದ ಶ್ರೀ ಮನೋಹರ್ ಡಿ. ಸಹಾಯಕ ಇಂಜಿನಿಯರ್ ವಾರ್ಡ್ 179 ಶಾಖಾಂಬರಿನಗರ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು ವಾರ್ಡ್ 179
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ